ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾ ಮತ್ತು ಪಾ ಉಪವಿಭಾಗ,
ಚಾವಿಸನಿನಿ,ಬೇಲೂರು -573115
ದೂರವಾಣಿ 08173-245224

**CHAMUNDESHWARI ELECTRICITY SUPPLY CORPORATION LIMITED**
**(A Govt. of Karnataka undertaking)**
O & M SubDivision,
CESC, Belur-573115
Website: WWW.CESCMYSORE.ORG
E-Mail: aeehonbelur@rediffmail.com

Company Identity Number [CIN]:- U40109KA2004SGC035177

---

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಬೇ/2023-24/1825-31 ದಿನಾಂಕ : 23.06.2023

## ಒಂದನೇ ತ್ರೈಮಾಸಿಕ ಜನ ಸಂಪರ್ಕ ಸಭೆ ನಡಾವಳಿಗಳು

ದಿನಾಂಕ : 13.6.2023 ಮಂಗಳವಾರದಂದು ಅಧೀಕ್ಷಕ ಇಂಜಿನಿಯರ್(ವಿ), ಹಾಸನ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆದ ಗ್ರಾಹಕರ ಕುಂದು ಕೊರತೆ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ;**

1. ಶ್ರೀ ಮಂಜುನಾಥ ಟಿ.ಸಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸಕಲೇಶಪುರ ವಿಭಾಗ.
2. ಶ್ರೀಮತಿ ಚಂದ್ರಮ್ಮ ಎಸ್ ಪಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೇಲೂರು ಉಪವಿಭಾಗ.
3. ಶ್ರೀ ಕುಮಾರ್ ಎನ್. ಡಿ. ಸಹಾಯಕ ಇಂಜಿನಿಯರ್(ವಿ), ಬೇಲೂರು ನಗರ ಶಾಖೆ.
4. ಶ್ರೀ ಚಂದ್ರ ಕಿರಿಯ ಇಂಜಿನಿಯರ್(ವಿ), ಹಗರೆ ಶಾಖೆ.
5. ಶ್ರೀ ರೇವಣ್ಣ ಕಿರಿಯ ಇಂಜಿನಿಯರ್(ವಿ), ಅರೇಹಳ್ಳಿ ಶಾಖೆ.
6. ಶ್ರೀ ಚಂದ್ರಶೇಖರ್ ಪ್ರಭಾರಿ ಕಿರಿಯ ಇಂಜಿನಿಯರ್(ವಿ), ಕೋಳಲು ಶಾಖೆ.
7. ಶ್ರೀ, ಹರೀಶ್ ಸಹಾಯಕ ಇಂಜಿನಿಯರ್(ವಿ), ಹಳೇಬೀಡು ಶಾಖೆ.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 11 : 00 ಗಂಟೆಗೆ ಪ್ರಾರಂಭ ಮಾಡಿದರು.**

---

**ಗ್ರಾಹಕರ ಕುಂದು ಕೊರತೆ ಸಭೆಯಲ್ಲಿ ಈ ಕೆಳಕಂಡ ದೂರುಗಳು ದಾಖಲಾಗಿರುತ್ತದೆ**

1) ಕೆ.ಎಸ್ ತೀರ್ಥಪ್ಪ ಕೆಸಗೋಡು ಗ್ರಾಮದವರು ಬಿಕ್ಕೋಡು ಗ್ರಾಮದಲ್ಲಿ ಹೊಸದಾಗಿ ವಿವಿ ಕೇಂದ್ರದ ಕಾಮಗಾರಿ ನಡೆಸದಿರುವ ಬಗ್ಗೆ ಕೇಳಿದರ.

ಸಭೆಯ ಅಧ್ಯಕ್ಷರು ಬಿಕ್ಕೋಡು ಗ್ರಾಮದಲ್ಲಿ ಹೊಸದಾಗಿ ವಿವಿ ಕೇಂದ್ರದ ಸ್ಥಾಪನೆ ಮಾಡುವ ಬಗ್ಗೆ ಜಾಗದ ವಿವಾದ ಹೈ ಕೋರ್ಟ್‌ನಲ್ಲಿ ಇರುವುದರಿಂದ, ಕೇಸ್ ಮುಗಿದಮೇಲೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು.

2) ಕೆ ಕೆ ಬಸವರಾಜು ಕಲ್ಲುಶೆಟ್ಟಿಹಳ್ಳಿ ಗ್ರಾಮದವರು(ಮೋ ನಂ :-8105308936) ಇಬ್ಬೀಡು ಕ್ಯಾಂಪ್ ಲೈನ್ ರವರಾದ ಕಲ್ಲೇಶ್ ರವರು ಕ್ಯಾಂಪ್ ವ್ಯಾಪ್ತಿಯ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲ ಹಾಗೂ ಬಿಲ್ಲೂರು, ಲಕ್ಷ್ಮೀಪುರ, ಹೊಸಳ್ಳಿ, ಬಲ್ಲೇನಹಳ್ಳಿ, ಕಲ್ಲುಶೆಟ್ಟಿಹಳ್ಳಿ ಗ್ರಾಮಗಳಿಗೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡುತ್ತಿರುವುದಿಲ್ಲವೆಂದು ಸಭೆಯಲ್ಲಿ ದೂರಿದರು.

ಸಭೆಯ ಅಧ್ಯಕ್ಷರು ಹಗರೆ ಶಾಖಾಧಿಕಾರಿಗಳಿಗೆ, ವಿದ್ಯುತ್ ವ್ಯತ್ಯಯಕ್ಕೆ ಸಂಬಂಧಿಸಿದಂತೆ ವಿಚಾರಿಸಲಾಗಿ, ಇಬ್ಬೀಡು ಎಫ್ ಫೀಡರ್ ಓವರ್ ಲೋಡರ್ ನಿಂದ ವಿದ್ಯುತ್ ವ್ಯತ್ಯಯವಾಗುತ್ತಿರುವುದರಿಂದ, ಶೀಘ್ರದಲ್ಲಿ ಲಿಂಕ್ ಲೈನ್ ಮಾಡಿ ಲೋಡನ್ನು ಬೇರ್ಪಡಿಸಲಾಗುವುದೆಂದು ಸಭೆಗೆ ತಿಳಿಸಿದರು. ಹಾಗೂ ಸಭೆಯ ಅಧ್ಯಕ್ಷರು ಲೈನ್ ಮ್ಯಾನ್ ಕರ್ತವ್ಯದ ಕುರಿತು ವರದಿಯನ್ನು ಸಲ್ಲಿಸುವಂತೆ ಉಪವಿಭಾಗಾಧಿಕಾರಿಯವರಿಗೆ ತಿಳಿಸಿದರು.

3) ಮಂಜುಳ ಕೋಂ ಹೆಚ್ ಎಲ್ ರವಿಕುಮಾರ್, ಹೆಚ್ ಹೊಸಳ್ಳಿ ಗ್ರಾಮದವರು ತಮ್ಮ ಐಪಿ ಸ್ಥಾವರವು LT4C ಜಕಾತಿಯಲ್ಲಿದ್ದು LT4a ಜಕಾತಿಗೆ ಬದಲಿಸಿಕೊಡುವಂತೆ ಸಭೆಯಲ್ಲಿ ಕೋರಿದರು.

ಸಭೆಯ ಅಧ್ಯಕ್ಷರು ಗ್ರಾಹಕರಿಗೆ ವಿದ್ಯುತ್ ಬಾಕಿ ಇರುವ ಮೊತ್ತವನ್ನು ಪಾವತಿಸಿ, ಜಕಾತಿ ಬದಲಾವಣೆಗೆ ಅರ್ಜಿಯನ್ನು ಉಪವಿಭಾಗ ಕಚೇರಿಯಲ್ಲಿ ನೊಂದಣಿಮಾಡುವಂತೆ ಗ್ರಾಹಕರಿಗೆ ಸೂಚಿಸಲಾಗಿರುತ್ತದೆ.

4) ಚೀಕನಹಳ್ಳಿ ಗ್ರಾಮಸ್ಥರು ತಮ್ಮ ಗ್ರಾಮದಲ್ಲಿರುವ ಪರಿವರ್ತಕಕ್ಕೆ DOLO ನ್ನು ಅಳವಡಿಸಿರುವುದಿಲ್ಲವೆಂದು ತಿಳಿಸಿದರು.

ಸಭೆಯ ಅಧ್ಯಕ್ಷರು ತೊಳಲು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅವಶ್ಯಕತೆ ಇದ್ದಲ್ಲಿ DOLO ನ್ನು ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.

5) ಕೆ ಕೆ ಬಸವರಾಜು ಇಬ್ಬೀಡು ಕಾಲೋನಿ ಗ್ರಾಮದವರು(ಮೋ ನಂ :-6360920889) ಇಬ್ಬೀಡು ಕಾಲೋನಿ ಗ್ರಾಮದಲ್ಲಿ ಹಾಳಾಗಿರುವ ಕಂಬಗಳನ್ನು ಬದಲಿಸುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಹಗರೆ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಹಾಳಾಗಿರುವ ಕಂಬಗಳನ್ನು ಬದಲಿಸಲು ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.

6) ಶಿವರಾಮಯ್ಯ ಸೋಮೇನಹಳ್ಳಿ ಗ್ರಾಮಸ್ಥರು (ಮೋ ನಂ :-9900401752) ರವರು ತಮ್ಮ ಗ್ರಾಮದಲ್ಲಿ 18 ಸಂಖ್ಯೆಯ ಎಲ್‌ಟಿ ಕಂಬಗಳಿದ್ದು, ಅದರಲ್ಲಿ ನಾಲ್ಕು ಕಂಬಗಳಿಗೆ ಮಾತ್ರ 03 ವೈರನ್ನು ಅಳವಡಿಸಿ ಬೀದಿ ದೀಪದ ವ್ಯವಸ್ಥೆಯಿರುತ್ತದೆ. ಬಾಕಿ ಉಳಿದಿರುವ ಕಂಬಗಳಿಗೆ ಹಾಲಿ ಇರುವ 02 ವೈರ್ ಜೊತೆಗೆ 1 ವೈರ್ ನ್ನುಎಳೆದು ಬೀದಿ ದೀಪದ ವ್ಯವಸ್ಥೆ ಮಾಡಿಕೊಡಬೇಕೆಂದು ತಿಳಿಸಿದರು.

ಸಭೆಯ ಅಧ್ಯಕ್ಷರು ಹಗರೆ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಹೆಚ್ಚುವರಿಯಾಗಿ ಬಾಕಿ ಉಳಿದಿರುವ ಕಂಬಗಳಿಗೆ 1 ವೈರ್ ನ್ನು ಎಳೆದು ಬೀದಿ ದೀಪದ ಕಂಟ್ರೋಲ್ ವ್ಯವಸ್ಥೆಗೆ ಅಂದಾಜು ಪಟ್ಟಿಯನ್ನು ಸ್ವಯಂ ಕಾರ್ಯ ಯೋಜನೆಡಿಯಲ್ಲಿ ತಯಾರಿಸಲು ಸೂಚಿಸಿ, ಸಂಬಂಧಿಸಿದ ಗ್ರಾಮ ಪಂಚಾಯಿತಿ ಅಧಿಕಾರಿಯವರು ವೆಚ್ಚವನ್ನು ಭರಿಸಬೇಕೆಂದು ಸಭೆಗೆ ತಿಳಿಸಲಾಗಿರುತ್ತದೆ.

7) ಲೋಲಾಕ್ಷೀ ಕೋಂ ಲೇ ಮೋಕ್ಷೇಗೌಡ ಅಡಗೂರು ಗ್ರಾಮದವರು(ಮೋ ನಂ :-9663558606) ನನ್ನ ಪತಿಯವರು ವಿದ್ಯುತ್ ಅಪಘಾತದಿಂದ ದಿನಾಂಕ 9.3.2023 ರಂದು ಮರಣ ಹೊಂದಿದ್ದು ಪರಿಹಾರದ ಹಣವನ್ನು ಕೊಡಿಸಕೊಡಬೇಕೆಂದು ಸಭೆಯಲ್ಲಿ ಕೋರಿದರು.

ಸಭೆಯ ಅಧ್ಯಕ್ಷರು ಹಳೇಬೀಡು ಶಾಖಾಧಿಕಾರಿಗಳಿಗೆ ಮತ್ತು ಉಪವಿಭಾಗಾಧಿಕಾರಿಯವರಿಗೆ ವಿದ್ಯುತ್ ಅಪಘಾತದ ವರದಿಯನ್ನು ತುರ್ತಾಗಿ ವೃತ್ತ ಕಚೇರಿಗೆ ಸಲ್ಲಿಸಲು ಸೂಚಿಸಿ, ದೂರುದಾರರಿಗೆ ಶವ ಪರೀಕ್ಷಾ ವರದಿಯನ್ನು ಉಪವಿಭಾಗ ಕಚೇರಿಗೆ ಸಲ್ಲಿಸಲು ಸೂಚಿಸಲಾಯಿತು.

8) ಭಗೀರಥಿ ಬಿನ್ ಮೊಗಣ್ಣಗೌಡ, ನವಿಲೆಹಳ್ಳಿ ಗ್ರಾಮದವರು (ಮೋ ನಂ :-9480135742) ನಿಮ್ಮ ನಿಗಮದವರು Back Bill ನ್ನು ಮಾಡಿದ್ದು, ರಿಯಾಯಿತಿ ಕೋರಿ ಮನವಿ ಸಲ್ಲಿಸಿದರು.

ಸಭೆಯ ಅಧ್ಯಕ್ಷರು, ನಿಗಮದಿಂದ ವಿದ್ಯುತ್ Back Bill ನ್ನು ವಿದ್ಯುತ್ ಕಳ್ಳತನ, Tariff Mis use ಇಂತಹ ಸಂಧರ್ಭಗಳಲ್ಲಿ ಮಾಡಲಾಗುವುದು ಆದುದರಿಂದ Back Bill ಮಾಡಿ ನೀಡಿರುವ ಬಿಲ್ಲಿನ ಮೊತ್ತವನ್ನು ಪಾವತಿಸುವಂತೆ ಸೂಚಿಸಲಾಗಿರುತ್ತದೆ.

9) ರಂಗಮ್ಮ ಕೋಂ ಸಿದ್ದಲಿಂಗಯ್ಯ, ಚಿಕ್ಕಬ್ಯಾಡಗೇರೆ ಗ್ರಾಮದವರು (ಮೋ ನಂ :-9449630335) ನಮಗೆ ಸಣ್ಣ ನೀರಾವರಿ ಇಲಾಖೆಯಿಂದ ಕೊಳುವೆ ಬಾವಿಯನ್ನು ಕೊರಿಸಿ ಕೊಟ್ಟಿದ್ದು ಇದುವರೆಗೂ ಸಹ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಟ್ಟಿರುವುದಿಲ್ಲವೆಂದು ತಿಳಿಸಿದರು.

ಸಭೆಯ ಅಧ್ಯಕ್ಷರು, ಗ್ರಾಹಕರಿಗೆ ಸಣ್ಣ ನೀರಾವರಿ ಇಲಾಖೆಯಿಂದ ಅರ್ಜಿಯನ್ನು ಉಪವಿಭಾಗ ಕಚೇರಿಯಲ್ಲಿ ನೊಂದಯಿಸಿದ್ದಲ್ಲಿ ನಿಗಮದ ನಿಯಮಾನುಸಾರ ಕೊಳುವೆ ಬಾವಿಗೆ ವಿದ್ಯುತ್ ಸಂಪರ್ಕ ನೀಡಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

10) ಶ್ರೀ ಮೊಗಣ್ಣಗೌಡ ಬಿನ್ ಈರೇಗೌಡ, ಸುಗ್ಗಲೂರು (ಮೋ ನಂ :-9901427848) ಗ್ರಾಮದವರು ಸ್ಥಾವರ ಸಂಖ್ಯೆ ಪಿ-375 ನ್ನು ಪರ್ಮನೆಂಟ್ ಡಿಸ್ ಮಾಡಲು ಕೋರಿದರು.

ಸಭೆಯ ಅಧ್ಯಕ್ಷರು, ಗ್ರಾಹಕರಿಗೆ ಬಾಕಿ ಉಳಿದಿರುವ ವಿದ್ಯುತ್ ಬಿಲ್ಲನ್ನು ಪಾವತಿಸಿದ್ದಲ್ಲಿ ನಿಗಮದ ನಿಯಮಾನುಸಾರ ಪರ್ಮನೆಂಟ್ ಡಿಸ್ ಮಾಡಲಾಗುವುದೆಂದು ತಿಳಿಸಿದರು.

11) ಮೊಗಸಾವರ ಗ್ರಾಮಸ್ಥರು 04 ವರ್ಷದಿಂದ ಮೊಗಸಾವರ ಕಾಲೋನಿ ಪರಿವರ್ತಕದಿಂದ ಜಿಯೋ ಟವರ್‌ನವರು ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಪಡೆದಿದ್ದು ಇದರಿಂದಾಗಿ ಲೋ ವೋಲ್ಟೇಜ್ ಸಮಸ್ಯೆ ಇರುತ್ತದೆ ಆದುದರಿಂದ ಜಿಯೋ ಟವರ್ ಸ್ಥಾವರಕ್ಕೆ ಪ್ರತ್ಯೇಕ ಟಿಸಿ ಮಾಡಿ ಲೋ ವೋಲ್ಟೇಜ್ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿದರು.

ಉಪವಿಭಾಗಧಿಕಾರಿಯವರು ಜಿಯೋ ಟವರ್ ನವರು ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕವನ್ನು ಸದರಿ ಪರಿವರ್ತಕದಿಂದ ಪಡೆದಿದ್ದು ಮುಂದಿನ ತಿಂಗಳಿಂದ ಜಿಯೋ ಟವರ್ ಸ್ಥಾವರಕ್ಕೆ ವಿದ್ಯುತ್ ಸಂಪರ್ಕವನ್ನು ಬದಲಿ ವ್ಯವಸ್ಥೆ ಮಾಡಿ ನೀಡಲಾಗುವುದೆಂದು ಸಭೆಗೆ ತಿಳಿಸಿದರು.

12) ಕುಶಾವರ ಗ್ರಾಮ ಪಂಚಾಯಿತಿ ಗ್ರಾಮಸ್ಥರು ತಮ್ಮ ಗ್ರಾಮದ ಐಪಿ ಸೆಟ್ ಗಳಿಗೆ ಈ ಹಿಂದೇ ಪ್ರಸಾಧಿಹಳ್ಳಿ ಫೀಡರ್ ನಿಂದ ನೀಡಿದ್ದು, ಆದರೆ ಇವಾಗ ಅರೇಹಳ್ಳಿ ಟೌನ್ ಫೀಡರ್ ನಿಂದ ನೀಡುತ್ತಿರುವುದರಿಂದ ಅತೀ ಹೆಚ್ಚು ವಿದ್ಯುತ್ ಅಡಚಣೆಯಾಗುತ್ತಿದ್ದು, ಆದುದರಿಂದ ಮಂಚೆಯಿಂದ ಫೀಡರ್ ಗೆ ಬದಲಿಸಿಕೊಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಅರೇಹಳ್ಳಿ ಶಾಖಾಧಿಕಾರಿಗಳಿಗೆ ವಿದ್ಯುತ್ ಅಡಚಣೆಯಾಗದಂತೆ, ಫೀಡರ್ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡಿ ವಿದ್ಯುತ್ ಸರಬರಾಜು ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

13) ಶಿವಾನಂದ ಹೆಚ್ ಎಮ್ ಬಿನ್ ಮರಿಯಯ್ಯ, ಹನಿಕೆ ಗ್ರಾಮದವರು ತಮ್ಮ ವಾಸದ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಬೇಲೂರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ವಾಸದ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದರು.

14) ಕೇಶವಾಪುರ ಗ್ರಾಮಸ್ಥರು ಐಪಿ ಸ್ಥಾವರಗಳಿಗೆ ಹೆಚ್ಚುವರಿಯಾಗಿ 100ಕೆವಿಎ ಪರಿವರ್ತಕವನ್ನು ಹಾಕಿ ಕೊಡಬೇಕೆಂದು ಕೋರಿದರು.

ಸಭೆಯ ಅಧ್ಯಕ್ಷರು ಹಗರೆ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಓವರ್‌ಲೋಡ್ ಆಗಿರುವ ಪರಿವರ್ತಕಗಳಿಗೆ ಐಪಿ ಸಿನಿಯಾರಿಟಿಯ ಆಧಾರದ ಮೇಲೆ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸುವಂತೆ ಸೂಚಿಸಿದರು.

15) ತೊಳಲು ಗ್ರಾಮಸ್ಥರು ತೊಳಲು ಫೀಡರ್ ಪದೇ ಪದೇ ವಿದ್ಯುತ್ ಅಡಚಣೆಯಾಗುತ್ತಿರುವ ಬಗ್ಗೆ ದೂರಿದರು.

ಸಭೆಯ ಅಧ್ಯಕ್ಷರು ತೊಳಲು ಶಾಖಾಧಿಕಾರಿಗಳಿಗೆ ವಿದ್ಯುತ್ ಅಡಚಣೆಯಾಗದಂತೆ, ಫೀಡರ್ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡಿ ವಿದ್ಯುತ್ ಸರಬರಾಜು ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

16) ಗೆಂಡೇಹಳ್ಳಿ ಗ್ರಾಮಸ್ಥರು ತೊಳಲು & ಗೆಂಡೇಹಳ್ಳಿ ಫೀಡರ್‌ಗೆ Parallel ಆಗಿ ಇನ್ನೊಂದು ಫೀಡರ್ ನ್ನು ಮಾಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ತೊಳಲು ಶಾಖಾಧಿಕಾರಿಗಳಿಗೆ ಮತ್ತು ಉಪವಿಭಾಗಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ Parallel ಆಗಿ ಇನ್ನೊಂದು ಫೀಡರ್ ರಚಿಸಲು ಅಂದಾಜು ಪಟ್ಟಿಯನ್ನು ತುರ್ತಾಗಿ ಸಲ್ಲಿಸುವಂತೆ ಸೂಚಿಸಿದರು.

17) ಬಂಟೇನಹಳ್ಳಿ ಗ್ರಾಮಸ್ಥರು ತಮ್ಮ ಐಪಿ ಸ್ಥಾವರಕ್ಕೆ ಬೇಲೂರು ಟೌನ್ ಫೀಡರ್ ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು.

ಸಭೆಯ ಅಧ್ಯಕ್ಷರು ಐಪಿ ಸ್ಥಾವರಕ್ಕೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಫಿಡರ್ ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ಸಾಧ್ಯವಿರುವುದಿಲ್ಲ, ಐಪಿ ಫೀಡರ್ ನಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಬೇಲೂರು ಶಾಖಾಧಿಕಾರಿಗಳಿಗೆ ಸೂಚಿಸಿದರು.

18) ಚನ್ನಾಪುರ & ತೊಳಲು ಗ್ರಾಮಸ್ಥರು ತಮ್ಮ ಮನೆಯ ಸ್ಥಾವರಕ್ಕೆ ಲೋ ವೋಲ್ಟೇಜ್ ಸಮಸ್ಯೆಯಿದ್ದು ಬಗೆಹರಿಸುವಂತೆ ಕೋರಿದರು.

ಸಭೆಯ ಅಧ್ಯಕ್ಷರು ತೊಳಲು ಶಾಖಾಧಿಕಾರಿಗಳಿಗೆ ಮತ್ತು ಉಪವಿಭಾಗಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅವಶ್ಯಕತೆ ಇದ್ದಲ್ಲಿ ಅಡಿಶನಲ್ ಪರಿವರ್ತಕಕ್ಕೆ ಅಂದಾಜು ಪಟ್ಟಿಯನ್ನು ತುರ್ತಾಗಿ ಸಲ್ಲಿಸುವಂತೆ ಸೂಚಿಸಿದರು.

19) ಶ್ರೀಮತಿ ಪ್ರೇಮ ಕೋಂ ಪುಟ್ಟಸ್ವಾಮಿ ಕೆರಲೂರು ಗ್ರಾಮದವರು ತಮ್ಮ ವಾಸದ ಮನೆಗೆ ನಿಗಮದ ವತಿಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ನಿಗಮದ ವತಿಯಿಂದ ವಾಸದ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವ ಯೋಜನೆ ಇಲ್ಲದಿರುವುದರಿಂದ ಸ್ವಯಂ ಕಾರ್ಯ ಯೋಜನೆಯಡಿಯಲ್ಲಿ ನಿರ್ವಹಿಸಿಕೊಳ್ಳಲು ಸೂಚಿಸಿದರು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು ಸಂಜೆ 5 : 00 ಕ್ಕೆ ಮುಕ್ತಾಯಗೊಳಿಸಲಾಯಿತು.**

23/6/2023

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಸೆಸ್ಕ್, ಬೇಲೂರು.

ಯಥಾ ಪ್ರತಿಗಳನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ವೃತ್ತ ರವರ ಆದ್ಯ ಗಮನಕ್ಕೆ
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಶಾಖಾಧಿಕಾರಿಗಳು ಬೇಲೂರು/ಅರೇಹಳ್ಳಿ/ತೊಳಲು/ಹಗರೆ/ಹಳೇಬೀಡು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
4. ಕಚೇರಿ ಪ್ರತಿ.